ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

SJ ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 29 ॥ ಸಂಚಿಕೆ : 15॥ UDP/1263/2018-20 || R.NO.50495/91 ॥ ತಾರೀಕು : 07–05–2019 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ಎಸ್.ಎಸ್.ಎಲ್.ಸಿ. : ಕುಂದಾಪುರ ವಲಯ ಪ್ರಥಮ

ಉಡುಪಿ ಜಿಲ್ಲೆಯ ರಾಜ್ಯಮಟ್ಟದಲ್ಲಿ ಸ್ಥಾನದಲ್ಲಿ ಸ್ವಲ್ಪ ಕೆಳಗೆ ಸರಿದರೂ ಪ್ರತಿ ವರ್ಷ ಉಡುಪಿ ಜಿಲ್ಲೆಯ ಫಲಿತಾಂಶದಲ್ಲಿ ಉನ್ನತ ಮಟ್ಟ ಕಾಯ್ದುಕೊಳ್ಳುತ್ತಿದ್ದ ಕುಂದಾಪುರ ವಲಯ ಈ ಬಾರಿಯೂ ಪ್ರಥಮ ಸ್ಥಾನ ಜಿಲ್ಲೆಯಲ್ಲಿ ಪಡೆಯುವ ಮೂಲಕ ಗೌರವ ಪಡೆದುಕೊಂಡಿದೆ. ಕುಂದಾಪುರ ವಲಯು 90.83 ಫಲಿತಾಂಶ ಗಳಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ್ ಕಾಮತ್ ಅವರ ಮಾರ್ಗದರ್ಶನದಲ್ಲಿ ಎಲ್ಲ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಫೂರ್ತಿ, ಪ್ರೇರಣೆ ನೀಡುವ ಕಾರ್ಯ ನಡೆದಿದ್ದು, 10 ಪ್ರೌಢ ಶಾಲೆಗಳು ಶೇ 100 ಫಲಿತಾಂಶ ಪಡೆಯುವ ಮೂಲಕ ಕಳೆದ ವರ್ಷಕ್ಕಿಂತ ದುಪ್ಪಟ್ಟು ಸಾಧನೆಯಾಗಿದೆ. ಕಳೆದ ಬಾರಿ 5 ಪ್ರೌಢ ಶಾಲೆಗಳು ಮಾತ್ರ ಶೇ 100 ಫಲಿತಾಂಶ ದಾಖಲಿಸಿದ್ದವು.




ಆಂಗ್ಲ ಮಾಧ್ಯಮ ಶಾಲೆಗಳಿಗೆ ಪೈಪೋಟಿ ನೀಡುವಲ್ಲಿ ಹಲವು ಸರಕಾರಿ ಪ್ರೌಢ ಶಾಲೆಗಳು ಯಶಸ್ವಿಯಾಗಿದ್ದು, 21 ಪ್ರೌಢಶಾಲೆಗಳು ಒಟ್ಟು ಶೇ 89.74 ಫಲಿತಾಂಶ ಪಡೆದಿದೆ. ಅನುದಾನಿತ ಪ್ರೌಢಶಾಲೆಗಳು ಶೇ 85.71 ಫಲಿತಾಂಶ ಗಳಿಸಿವೆ. ಅನುದಾನ ರಹಿತ ಪ್ರೌಢ ಶಾಲೆಗಳು 96.03 ಫಲಿತಾಂಶ ಗಳಿಸಿವೆ.

ಬೈಂದೂರು ವಲಯ ಸಹ ಕಳೆದ ಬಾರಿಗಿಂತ ಉತ್ತಮ ಫಲಿತಾಂಶ ದಾಖಲಿಸಿದ್ದು, 5 ಪ್ರೌಢಶಾಲೆಗಳು ಶೇ 100 ಫಲಿತಾಂಶ ಪಡೆದಿವೆ. ಬೈಂದೂರು 87.95 ಫಲಿತಾಂಶದ ಮೂಲಕ ಜಿಲ್ಲೆಯಲ್ಲಿ 4 ನೇ ಸ್ಥಾನ ಪಡೆದಿದೆ.

ಪಠ್ಯ ವಿಷಯಗಳಲ್ಲಿ ಶೇ 100 ಫಲಿತಾಂಶ ಪಡೆದ ಶಿಕ್ಷಕರನ್ನು ಗೌರವಿಸುವ ಕಾರ್ಯಕ್ರಮ ನಡೆಯಲಿದ್ದು ಈ ವರ್ಷ ಈ ಸಾಧನೆಗೈದ ಶಿಕ್ಷಕರ ಸಂಖ್ಯೆಯಲ್ಲೂ ದ್ವಿಗುಣವಾಗಿದೆ.

ಕೆಲವು ಪ್ರೌಢಶಾಲೆಗಳು ಒಂದೆರಡು ಮಕ್ಕಳ ಅನುತ್ತೀರ್ಣತೆಯಿಂದ ಶೇ.100 ಫಲಿತಾಂಶದಿಂದ ವಂಚಿತವಾಗಿದ್ದು ಮರುಪರೀಕ್ಷೆಯಲ್ಲಿ ಈ ವಿದ್ಯಾರ್ಥಿಗಳು ತೇರ್ಗಡೆ ಹೊಂದುವ ಮೂಲಕ ಶೇ.100 ಸ್ಥಾನ ತಲುಪಲಿವೆ.

## ಶೇ. 100 ಸಾಧನೆ

ಕುಂದಾಪುರ ತಾಲ್ಲೂಕಿನ ಈ ಕೆಳಗಿನ ಪ್ರೌಢ ಶಾಲೆಗಳು ಶೇ.100 ಫಲಿತಾಂಶ ಪಡೆದಿವೆ: ಅಮಾಸೆಬೈಲು ಪ್ರೌಢಶಾಲೆ , ಕೋಣಿ ಪ್ರೌಢಶಾಲೆ , ಹೆಸ್ಕತ್ತೂರು ಪ್ರೌಢಶಾಲೆ, ಚಿತ್ತೂರು ಪ್ರೌಢಶಾಲೆ , ಬೈಂದೂರು ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕೋಟೇಶ್ವರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ವೆಂಕಟರಮಣ ಆಂಗ್ಲಮಾಧ್ಯಮ ಪ್ರೌಢಶಾಲೆ ಕುಂದಾಪುರ, ಸೈಂಟ್ ಜೋಸೆಫ್ ಪ್ರೌಢಶಾಲೆ ಕುಂದಾಪುರ , ಗಂಗೊಳ್ಳಿಯ ಎಸ್.ವಿ.ಎಸ್ . ಆಂಗ್ಲವಮಾಧ್ಯಮ ಪ್ರೌಢಶಾಲೆ , ಬೈಂದೂರು ಎಚ್.ಎಮ್.ಎಮ್.ಎಸ್.ಆಂಗ್ಲಮಾಧ್ಯಮ ಪ್ರೌಢಶಾಲೆ , ಕಿರಿಮಂಜೇಶ್ವರ ಮಸ್ಕಿ ಶುಭದಾ ಪ್ರೌಢಶಾಲೆ , ಶಂಕರನಾರಾಯಣ ಮದರ್‌ಥೆರೆಸಾ ಆಂಗ್ಲಮಾಧ್ಯಮ ಪ್ರೌಢಶಾಲೆ , ಗಂಗೊಳ್ಳಿ ಸ್ಟೆಲ್ಲಾಮೇರಿಸ್ ಆಂಗ್ಲಮಾಧ್ಯಮ ಪ್ರೌಢಶಾಲೆ , ಸಿದ್ಧಾಪುರ ಸರಸ್ವತಿ ವಿದ್ಯಾಲಯ ಆಂಗ್ಲಮಾಧ್ಯಮ ಪ್ರೌಢಶಾಲೆ , ಉಪ್ಪುಂದ ವಿವೇಕಾನಂದ ಆಂಗ್ಲಮಾಧ್ಯಮ ಪ್ರೌಢಶಾಲೆ, ಶೇ.100 ಫಲಿತಾಂಶ ಪಡೆದು ಸಾಧನೆ ಮಾಡಿದ ಶಿಕ್ಷಣ ಸಂಸ್ಥೆಗಳಾಗಿವೆ. ಕುಂದಾಪುರ ವೆಂಕಟರಮಣ ಆಂಗ್ಲಮಾಧ್ಯಮ ಪ್ರೌಢಶಾಲೆಯ ಸಂಜನಾ ಜೆ. ಹಾಗೂ ಕುಂದಾಪುರ ವಿ.ಕೆ.ಆರ್.ಆಚಾರ್ಯ ಆಂಗ್ಲಮಾಧ್ಯಮ ಪ್ರೌಢಶಾಲೆಯ ಸೂರಜ್ ಎಂ.ಎಸ್. 620 ಅಂಕಗಳಿಸುವ ಮೂಲಕ ತಾಲೂಕಿನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಪದವಿಪೂರ್ವ ಶಿಕ್ಷಣದ ಬೆಳ್ಳಿ ಬೆಳಕು...
SRI VENKATRAMANA PRE-UNIVERSITY COLLEGE, KUNDAPURA
Managed by: Sri Venkatramana Dev Educational and Cultural Trust (Regd.)
Kundapura, Udupi District
Email: srivenkatramanapuc@gmail.com
Ph: 08254-232376




ADMISSIONS OPEN FOR I P.U. 2019-20
COURSES OFFERED : *Physics, Chemistry, Maths, Biology (PCMB) * Physics, Chemistry, Maths, Computer Science (PCMC) * Physics, Chemistry, Maths, Statistics (PCMS) * Economics, Business Studies, Accountancy, Computer Science (EBAC) *Economics, Business Studies, Accountancy, Statistics (EBAS)
ಬೋಧನೆಯಲ್ಲಿ ಇತಿಹಾಸ ನಿರ್ಮಿಸಿ ಶಿಷ್ಯರ ಚಿತ್ತಾಪಹಾರಕವಾದ ಪರಿಣತ ಪ್ರಾಧ್ಯಾಪಕ ವೃಂದದ ಸಂಗಮ
ಶ್ರೀ ರಾಮಮೂರ್ತಿ
ನಿವೃತ್ತ ಪ್ರಾಂಶುಪಾಲರು, ಎಸ್.ಎಂ.ಎಸ್. ಪ.ಪೂ. ಕಾಲೇಜು
ಶ್ರೀ ರಮಾಕಾಂತ ರೇವಣ್ಕರ್
ನಿವೃತ್ತ ಪ್ರಾಂಶುಪಾಲರು, ಸ.ವಿ.ಪ.ಪೂ. ಕಾಲೇಜು, ಗಂಗೊಳ್ಳಿ
ಶ್ರೀ ಎಂ. ಸೂರ್ಯನಾರಾಯಣ ಅಡಿಗ
ನಿವೃತ್ತ ಪ್ರಾಧ್ಯಾಪಕರು, ಭಂಡಾರ್‌ಕರ್ಸ್ ಕಾಲೇಜು, ಕುಂದಾಪುರ
ಪದವಿಪೂರ್ವ ಶಿಕ್ಷಣ ಅವಕಾಶಗಳ ಹೆಬ್ಬಾಗಿಲಾಗಬೇಕು ಎಂದು ಕನಸು ಕಂಡ ಶ್ರೀ ವೆಂಕಟರಮಣ ದೇವ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಸೂತ್ರಧಾರರ ರಸಸೃಷ್ಟಿಯಾಗಿ ರೂಪುಗೊಂಡ ಅನನ್ಯತೆಯ ಆಗರ ನಮ್ಮೀ ವಿದ್ಯಾಸಂಸ್ಥೆ.

ಇದು ನಮ್ಮ ಅಪೇಕ್ಷೆ - ನಿಮ್ಮ ನಿರೀಕ್ಷೆ ....
* ವಿಜ್ಞಾನ – ವಾಣಿಜ್ಯ ವಿಭಾಗಗಳಲ್ಲಿ ಚೇತೋಹಾರಿ ಶಿಕ್ಷಣ
* ಶೈಕ್ಷಣಿಕ ಕ್ಷೇತ್ರದಲ್ಲಿ ಕಳೆದ ಮೂರುವರೆ ದಶಕಗಳಿಗಿಂತಲೂ ಹೆಚ್ಚು ಸೇವಾ ಅನುಭವ ಹೊಂದಿರುವ ಪ್ರಾಧ್ಯಾಪಕ ವೃಂದ
* ಸ್ವ ಕಲಿಕೆಯ ಸಾಮರ್ಥ್ಯವರ್ಧನೆಗೆ ಗ್ರಂಥಾಲಯ – ಜ್ಞಾನಗಂಗೋತ್ರಿ
* ಸಂತಸದ ಕಲಿಕೆಗೆ ಮಾಲಿನ್ಯಮುಕ್ತ ಪರಿಸರ, ಆಧುನಿಕ ಪ್ರಯೋಗಾಲಯಗಳು.
* ಸುಂದರ ತರಗತಿಗಳು – ಪೀಠೋಪಕರಣಗಳು, ಶುದ್ಧ ಕುಡಿಯುವ ನೀರು, ಐಚ್ಛಿಕವಾದ ಮಧ್ಯಾಹ್ನದ ಭೋಜನ ವ್ಯವಸ್ಥೆ
* ಪಠ್ಯ, ಪಠ್ಯಪೂರಕ ಹಾಗೂ ಪಠ್ಯೇತರ ಚಟುವಟಿಕೆಗಳ ಸಂಗಮ
* ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿಯಾದ ಬದುಕಿನ ಪಾಠ
* ನುರಿತ ತಜ್ಞರಿಂದ NEET, CET, JEE ಹಾಗೂ CPT ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ/ ಮಾರ್ಗದರ್ಶನ
* ಬೋಧನೆಯಲ್ಲಿ ಆಧುನಿಕ ತಂತ್ರಜ್ಞಾನದ ಸಮರ್ಥ ಬಳಕೆ
* 100% ಫಲಿತಾಂಶದ ಹಾದಿಯಲ್ಲಿ ನಿರಂತರ ಬೋಧನೆ

ರಸಾಯನಶಾಸ್ತ್ರ ವಿಭಾಗ
ಶ್ರೀ ರಮಾಕಾಂತ ರೇವಣ್ಕರ್
ಶ್ರೀ ಸಂದೀಪ್ ಗಾಣಿಗ
ಭೌತಶಾಸ್ತ್ರ ವಿಭಾಗ
ಶ್ರೀ ರಾಮಮೂರ್ತಿ
ಶ್ರೀಮತಿ ಸುಕನ್ಯಾ ಆರ್. ಭಟ್
ಶ್ರೀ ವಿನಾಯಕ್ ಭಟ್
ಗಣಿತಶಾಸ್ತ್ರ ವಿಭಾಗ
ಪ್ರೊ. ಸೂರ್ಯನಾರಾಯಣ ಅಡಿಗ
ಶ್ರೀ ಗಣೇಶ್ ಮೊಗವೀರ
ಶ್ರೀ ಸುಜೀಯ

ಜೀವಶಾಸ್ತ್ರ ವಿಭಾಗ
ಶ್ರೀಮತಿ ಅಕ್ಷತಾ
ಶ್ರೀಮತಿ ಚೇತನಾ ಶೆಣೈ
ಸಂಖ್ಯಾಶಾಸ್ತ್ರ ವಿಭಾಗ
ಕುಮಾರಿ ವಿದ್ಯಾಶ್ರೀ
ಗಣಕವಿಜ್ಞಾನ ವಿಭಾಗ
ಶ್ರೀಮತಿ ವೀಕ್ಷಿತಾ ಕೆ.
ಅರ್ಥಶಾಸ್ತ್ರ ವಿಭಾಗ
ಶ್ರೀಮತಿ ಲತಾ ಪೈ
ಕನ್ನಡ ವಿಭಾಗ
ಶ್ರೀಮತಿ ಸುನೀತಾ ಎಸ್.

ವಾಣಿಜ್ಯ ವಿಭಾಗ
ಶ್ರೀಮತಿ ಸವಿತಾ ರಮೇಶ್
ಶ್ರೀ ಶ್ರೀಧರ್ ಗಾಣಿಗ
ಇಂಗ್ಲಿಷ್ ವಿಭಾಗ
ಶ್ರೀ ಅಶೋಕ್
ಶ್ರೀಮತಿ ಸುಪ್ರೀತಾ ಶೆಟ್ಟಿ
ಸಂಸ್ಕೃತ ವಿಭಾಗ
ಶ್ರೀಮತಿ ಮಮತಾ ಪಿ.
ಹಿಂದಿ ವಿಭಾಗ
ಶ್ರೀಮತಿ ಲತಾ ಪೈ
ಶ್ರೀಮತಿ ಚೇತನಾ ಶೆಣೈ



ಹುಮಾ ಹುಸ್ನಾ
587/600
ವಾಣಿಜ್ಯ ವಿಭಾಗಕ್ಕೆ
ರಾಜ್ಯಕ್ಕೆ 10ನೇ ಸ್ಥಾನ



ಅಂಜಲಿ ಶೇಟ್
580/600
ವಿಜ್ಞಾನ ವಿಭಾಗದಲ್ಲಿ
ಅತೀ ಹೆಚ್ಚು ಅಂಕ ಗಳಿಕೆ

ಅಧ್ಯಯನ - ಅನುಭವ - ಅನುಭಾವಗಳ ಅನುಸಂಧಾನವಾದ ಅಸದೃಶ ಅಧ್ಯಾಪಕ ವೃಂದ ಪೂರ್ಣತೆಯಿಂದ ಪರಿಪೂರ್ಣತೆಯೆಡೆಗೆ...

ಶ್ರೀ ಕೆ. ಮೋಹನ್ ಕಾಮತ್
ಅಧ್ಯಕ್ಷ
ಶ್ರೀ ಕೆ. ರಾಧಾಕೃಷ್ಣ ಶೆಣೈ
ಕಾರ್ಯದರ್ಶಿ
ಶ್ರೀಮತಿ ಚಿತ್ರಾ ಕಾರಂತ್
ಶೈಕ್ಷಣಿಕ ಸಲಹೆಗಾರರು
ಶ್ರೀ ಗಣೇಶ್ ಮೊಗವೀರ
ಪ್ರಾಂಶುಪಾಲರು

